





**(6ನೇ ಪುಟದಿಂದ)**

ಪಾತರಗಿತ್ತಿಯೇ ಆಗಿದ್ದರೆ, ಅವೆರಡೂ ಹೋರಾಡುವುದು ಸಾಮಾನ್ಯ. ಮುಂದೆ ಸಿಗಲಿರುವ ಹೆಣ್ಣಿಗಾಗಿ ಈ ಹಾರಾಟದ ಹೋರಾಟ. ಗಂಡು ಚಿಟ್ಟೆಗೆ ಸಿಕ್ಕಿರುವುದು ತನ್ನದೇ ಜಾತಿಯ ಹೆಣ್ಣಾಗಿದ್ದರೆ ಮಾತ್ರ ಅದು ತನ್ನ ಪ್ರಣಯ ಚೇಷ್ಟೆಗೆ ಮುಂದಡಿಯಿಡುತ್ತದೆ.

ಕೆಲವೊಮ್ಮೆ ಜೋಡಿ ಚಿಟ್ಟೆಗಳು ಪ್ರಣಯ ನಿರತವಾಗಿರುವಾಗ, ಮೂರನೆಯವನಾಗಿ ಬರುವ ಗಂಡು ಚಿಟ್ಟೆ ಉಳಿದೆರಡಕ್ಕೆ ತೊಂದರೆ ಕೊಡುವುದೂ ನಡೆಯುತ್ತದೆ.

ಮನುಷ್ಯ ಜಗತ್ತಿಗೆ ವರ್ಷಕ್ಕೊಮ್ಮೆ ಪ್ರೇಮಿಗಳ ದಿನವಾದರೆ ಈ ಪಾತರಗಿತ್ತಿಗಳಿಗೆ ಅನುದಿನವೂ ಪ್ರೇಮಿಗಳ ದಿನ.  ಪಾತರಗಿತ್ತಿಗಳ ಇಂತಹ ಪ್ರೇಮದಾಟದ ಕೆಲವು ಅದ್ಭುತ ಚಿತ್ರಗಳು ಇಲ್ಲಿವೆ.